# ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ

## ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560 018

ಸಂಖ್ಯೆ: ಕಸಂವಿ:ಖಾ.ಅ/ವಿ.ಮ.ವಿ.ಉ/ಪರೀಕ್ಷೆಗಳು/05/2014–15 **ದಿನಾಂಕ: 06.09.2014**

**ಅಧಿಸೂಚನೆ**

**ವಿಷಯ: ಖಾಸಗಿ ಅಭ್ಯರ್ಥಿಗಳಿಂದ ಬಿ.ಎ. ವಿದ್ವನ್ಮಧ್ಯಮಾ, ಎಂ.ಎ ವಿದ್ವದುತ್ತಮಾ ಪರೀಕ್ಷೆಗಳಿಗೆ ಅರ್ಜಿಗಳನ್ನು ಆಹ್ವಾನಿಸುವ ಬಗೆಗೆ**

2014–15ನೇ ಸಾಲಿನಲ್ಲಿ ನಡೆಯಲಿರುವ ಸಂಸ್ಕೃತ/ವೇದ ಬಿ.ಎ. ವಿದ್ವನ್ಮಧ್ಯಮಾ ಮತ್ತು ಸಂಸ್ಕೃತ/ವೇದ ಎಂ.ಎ. ವಿದ್ವದುತ್ತಮಾ ಪರೀಕ್ಷೆಗಳಿಗೆ ಹಾಜರಾಗಲು ಬಯಸುವ ಖಾಸಗಿ ಅಭ್ಯರ್ಥಿಗಳಿಂದ ನೋಂದಣಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಖಾಸಗಿ ಅಭ್ಯರ್ಥಿಗಳು ನೇರವಾಗಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಆವೇದನಾ ಪತ್ರವನ್ನು ಸಲ್ಲಿಸಬೇಕು. ಹೊಸದಾಗಿ ಖಾಸಗಿ ಅಭ್ಯರ್ಥಿಗಳು ಕಾಲೇಜಿನ ಮೂಲಕ ಆವೇದನ ಪತ್ರವನ್ನು ಸಲ್ಲಿಸುವಂತಿಲ್ಲ.

**ಖಾಸಗಿ ಅಭ್ಯರ್ಥಿಗಳ ಪ್ರವೇಶ ನಿಯಮಗಳು**

**ಬಿ.ಎ. ಸಂಸ್ಕೃತ ಶಾಸ್ತ್ರ/ಭಾಷಾ ವಿಭಾಗ ವಿದ್ವನ್ಮಧ್ಯಮಾ**

**ಪಾಠ್ಯಕ್ರಮದ ಅವಧಿ– 3 ವರ್ಷಗಳು**

ಪ್ರವೇಶಾರ್ಹತೆ

1. ಸಂಸ್ಕೃತ 'ಸಾಹಿತ್ಯ' ಪರೀಕ್ಷೆಯ ಎಲ್ಲಾ ಭಾಗಗಳಲ್ಲಿ ಉತ್ತೀರ್ಣತೆ

   **ಅಥವಾ**
2. ಪ್ರಾಕ್ ಶಾಸ್ತ್ರೀ/ ಪ್ರಾಕ್ ಶಿರೋಮಣಿ/ ಉತ್ತರಮಧ್ಯಮಾ/ ಮಧ್ಯಮಾ/ ಉಪಶಾಸ್ತ್ರೀ ಅಥವಾ ತತ್ಸಮಾನವಾದ ಅಧಿಕೃತ ಪರೀಕ್ಷಾಮಂಡಳಿ ನಡೆಸುವ ಪರೀಕ್ಷೆಯಲ್ಲಿ ಉತ್ತೀರ್ಣತೆ

   **ಅಥವಾ**
3. ಪಿ.ಯು.ಸಿ (ಇಂಟರ್ ಮೀಡಿಯೆಟ್/12 ನೇ ತರಗತಿ) ಪರೀಕ್ಷೆಯಲ್ಲಿ ಸಂಸ್ಕೃತಭಾಷೆಯೊಂದಿಗೆ ಉತ್ತೀರ್ಣತೆ.

   **ಅಥವಾ**
4. ಪಿ.ಯು.ಸಿ (ಇಂಟರ್ ಮೀಡಿಯೆಟ್/12 ನೇ ತರಗತಿ) ಪರೀಕ್ಷೆಯಲ್ಲಿ ಉತ್ತೀರ್ಣವಾಗಿದ್ದು, ಯಾವುದೇ ವಿಶ್ವವಿದ್ಯಾಲಯದ ಸಂಸ್ಕೃತ ಡಿಪ್ಲೊಮಾ / ಸಂಸ್ಕೃತ ಕೋವಿದ / ಸಂಸ್ಕೃತ ದ್ವಿತೀಯದೀಕ್ಷಾ/ ಸಂಸ್ಕೃತ ವಿಚಕ್ಷಣ / ಆಗಮ ಪ್ರವೀಣ ಈ ಪರೀಕ್ಷೆಗಳಲ್ಲಿ ಉತ್ತೀರ್ಣತೆ.

   **ಅಥವಾ**
5. ಯಾವುದೇ ವಿಶ್ವವಿದ್ಯಾಲಯದ ಪದವಿ(ಬಿ.ಎ) ಪರೀಕ್ಷೆಯಲ್ಲಿ ಸಂಸ್ಕೃತಭಾಷೆಯೊಂದಿಗೆ ಉತ್ತೀರ್ಣತೆ.

   **ಅಥವಾ**
6. ಯಾವುದೇ ವಿಶ್ವವಿದ್ಯಾಲಯದ ಪದವಿ(ಎಂ.ಎ) ಪರೀಕ್ಷೆಯಲ್ಲಿ ಉತ್ತೀರ್ಣತೆ.

   **ಅಥವಾ**
7. ಬಿ.ಎ ಇಂಟಿಗ್ರೇಟೆಡ್ ಕನ್ನಡ ಪಂಡಿತ ಮಧ್ಯಮ ಪದವಿಯಲ್ಲಿ ಉತ್ತೀರ್ಣತೆ.

   **ಅಥವಾ**
8. ಪಿ.ಯು.ಸಿ (ಇಂಟರ್ ಮೀಡಿಯೆಟ್/12 ನೇ ತರಗತಿ) ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ನಡೆಸುವ ಪ್ರವೇಶಪರೀಕ್ಷೆಯಲ್ಲಿ ಉತ್ತೀರ್ಣತೆ.

## ಎಂ.ಎ ಸಂಸ್ಕೃತ ಶಾಸ್ತ್ರ/ಭಾಷಾ ವಿದ್ವದುತ್ತಮಾ

**ಪಾಠ್ಯಕ್ರಮದ ಅವಧಿ– 2 ವರ್ಷಗಳು**

**ಪ್ರವೇಶಾರ್ಹತೆ**

1. ಸಂಬಂಧಿಸಿದ ಶಾಸ್ತ್ರ ಭಾಗದಲ್ಲಿ, ಬಿ.ಎ. ಸಂಸ್ಕೃತ ವಿದ್ವನ್ಮಧ್ಯಮಾ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣತೆ.

2. ಯಾವುದೇ ವಿಶ್ವವಿದ್ಯಾಲಯದ ಪದವಿ(ಬಿ.ಎ) ಪರೀಕ್ಷೆಯಲ್ಲಿ ಸಂಸ್ಕೃತಭಾಷೆಯೊಂದಿಗೆ ಉತ್ತೀರ್ಣತೆ ಇದ್ದು ಎಂ.ಎ ಸಂಸ್ಕೃತ ಉತ್ತೀರ್ಣತೆ ಇದ್ದಲ್ಲಿ ಅಥವಾ ಬೇರೆ ಶಾಸ್ತ್ರಭಾಗದಲ್ಲಿ ಸಂಸ್ಕೃತ ವಿದ್ವನ್ಮಧ್ಯಮಾ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ನಡೆಸುವ ಪ್ರವೇಶ ಪರೀಕ್ಷೆಯ ಮೂಲಕ ಯಾವುದೇ ಶಾಸ್ತ್ರದಲ್ಲಿ ಪ್ರವೇಶ ಪಡೆಯಬಹುದು.

3. ಖಾಸಗಿ ವಿದ್ಯಾರ್ಥಿಗಳು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ನೇರವಾಗಿ ಪರೀಕ್ಷೆಗಾಗಿ ಆವೇದನಪತ್ರವನ್ನು ಸಲ್ಲಿಸಬೇಕು.ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾದಲ್ಲಿ ಪ್ರಧಾನ ಪರೀಕ್ಷೆಯನ್ನು ಬರೆಯಲು ಅವಕಾಶ ನೀಡಲಾಗುವುದು. ಯಾವುದೇ ಕಾಲೇಜಿನ ಮೂಲಕ ಖಾಸಗಿ ಅಭ್ಯರ್ಥಿಗಳ ಆವೇದನಪತ್ರವನ್ನು ಮಾನ್ಯಮಾಡಲಾಗುವುದಿಲ್ಲ.

**ವೇದ ವಿಭಾಗದ ಪದವಿಗಳ ಪ್ರವೇಶಾರ್ಹತೆ**
**ಬಿ.ಎ. ವೇದ ವಿದ್ವನ್ಮಧ್ಯಮಾ**

1. ವೇದ ಮೂಲ ಪರೀಕ್ಷೆಯಲ್ಲಿ ಉತ್ತೀರ್ಣತೆ.
2. ಪಿ.ಯು.ಸಿ ಯಲ್ಲಿ ಸಂಸ್ಕೃತ ಒಂದು ಭಾಷೆಯಾಗಿ ತೇರ್ಗಡೆಹೊಂದಿದ್ದು, ವೇದ ಮೂಲ ಪರೀಕ್ಷೆಯಲ್ಲಿ ಉತ್ತೀರ್ಣತೆ.
3. ಸಂಸ್ಕೃತ ಸಾಹಿತ್ಯ ಅಥವಾ ತತ್ಸಮಾನವಾದ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.
4. ರಾಷ್ಟ್ರೀಯ ಸ್ತರದ ಮಾನ್ಯತೆಯನ್ನು ಹೊಂದಿದ ವೇದ ಶಾಲೆಗಳಲ್ಲಿ ಸಂಸ್ಕೃತ ಭಾಷೆಯಲ್ಲಿ ವೇದ ಮೂಲ ಪರೀಕ್ಷೆಯಲ್ಲಿ ಉತ್ತೀರ್ಣತೆ.

**ಎಂ.ಎ ವೇದ ವಿದ್ವದುತ್ತಮಾ**

1. ವೇದ ವಿದ್ವನ್ಮಧ್ಯಮಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು ಅಥವಾ ಸಂಸ್ಕೃತ ಭಾಷೆಯೊಂದಿಗೆ ಸಂಬಂಧಿತ ವೇದ ವಿದ್ವನ್ಮದ್ಯಮಾ ಪರೀಕ್ಷೆಗೆ ತತ್ಸಮಾನವಾದ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.

2. ಯಾವುದೇ ಶಾಸ್ತ್ರದಲ್ಲಿ /ಸಂಸ್ಕೃತ ಸ್ನಾತಕ(ಬಿ.ಎ)/ ಸಂಸ್ಕೃತ (ಎಂ.ಎ) ಪದವಿಯಲ್ಲಿ ಉತ್ತೀರ್ಣರಾಗಿದ್ದು ವೇದ ಕ್ರಮಾಂತ ಅಧ್ಯಯನವನ್ನು ಪೂರೈಸಿದ ಪ್ರಮಾಣ ಪತ್ರವನ್ನು ಯಾವುದೇ ರಾಷ್ಟ್ರೀಯ ಸ್ತರದ ವೇದ ಪಾಠಶಾಲೆಯಿಂದ ಪಡೆದಿರಬೇಕು.

**ಸೂಚನೆ:**

ಯಾವುದೇ ವೇದವಿಭಾಗದಲ್ಲಿ ಪ್ರವೇಶ ಪಡೆಯಲು ಆಯಾಯ ವೇದವಿಭಾಗದಲ್ಲಿಯೇ ಅರ್ಹತಾ ಪ್ರಮಾಣ ಪತ್ರವನ್ನು ಪಡೆದಿರಬೇಕು.

**1) ಆಂತರಿಕ ಪರೀಕ್ಷೆ:**

1. ಕೇವಲ ಶಾಸ್ತ್ರ/ವೇದ ವಿದ್ವದುತ್ತಮಾ ಪರೀಕ್ಷೆಗಳಲ್ಲಿ ಪ್ರತಿ ಪತ್ರಿಕೆಯಲ್ಲಿ 20 ಅಂಕಗಳ ಆಂತರಿಕ ಪರೀಕ್ಷೆ ಇರುತ್ತದೆ.

2. ಖಾಸಗಿ ಪರೀಕ್ಷೆ ಬರೆಯುವವರು ನೇರವಾಗಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ತಮ್ಮ ಹೆಸರು, ನೋಂದಣಿ ಪತ್ರ ಸಂಖ್ಯೆ ನಮೂದಿಸುವುದರೊಂದಿಗೆ ಆಯಾ ವಿಷಯದಲ್ಲಿ 10 ಪುಟಗಳ ಪ್ರಬಂಧವನ್ನು ಸಿದ್ಧಪಡಿಸಿ ನೇರವಾಗಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪರೀಕ್ಷಾಂಗದ ಮುಖ್ಯಸ್ಥರಿಗೆ ಸಲ್ಲಿಸಿ ಸಹಿ ಮಾಡಿಸಿಕೊಳ್ಳುವುದು. ವಿಳಂಬವಾದಲ್ಲಿ ಆ ಅಂಕಗಳನ್ನು ಪರಿಗಣಿಸಲಾಗುವುದಿಲ್ಲ.

**2) ವಾರ್ಷಿಕ ಲಿಖಿತ ಪರೀಕ್ಷೆ**

**1. ವಿದ್ವನ್ಮಧ್ಯಮಾ ಪರೀಕ್ಷೆಯಲ್ಲಿ ಶಾಸ್ತ್ರ ಭಾಗಕ್ಕೆ 100 ಅಂಕಗಳಿಗೆ ಪರೀಕ್ಷೆ ನಡೆಸಲಾಗುತ್ತದೆ. ಪ್ರತಿ ಪರೀಕ್ಷೆಯಲ್ಲಿ ಕನಿಷ್ಠ 35 ಅಂಕಗಳು ಉತ್ತೀರ್ಣತೆಯ ಮಾನದಂಡವಾಗಿರುತ್ತದೆ.**

**35 ರಿಂದ 49–ಉತ್ತೀರ್ಣ**
**50 ರಿಂದ 59– ದ್ವಿತೀಯ ಶ್ರೇಣಿ**
**60 ರಿಂದ 79– ಪ್ರಥಮ ಶ್ರೇಣಿ**
**80 ರಿಂದ 100– ವಿಶಿಷ್ಟ ಶ್ರೇಣಿ**

**ಸೂಚನೆ: ಈ ಪರೀಕ್ಷೆಗಳಲ್ಲಿ ಅನುತ್ತೀರ್ಣವಾದ ಪತ್ರಿಕೆಗಳನ್ನು ಉಳಿಕೆ ವಿಷಯ ಮುಂದುವರೆಸುವ (carry over) ಪದ್ಧತಿಯಲಿ ಮುಂದಿನ ವರ್ಷದ ವ್ಯಾಸಂಗದ ಜೊತೆಗೆ ಮುಂದುವರೆಸಿ ಪರೀಕ್ಷೆ ಬರೆಯುವ ಅವಕಾಶವಿರುತ್ತದೆ.**

1. ಒಟ್ಟಾರೆ ವಿದ್ವನ್ಮಧ್ಯಮಾ ವ್ಯಾಸಂಗಾವಧಿ 6 ವರ್ಷಕ್ಕೆ, ವಿದ್ವದುತ್ತಮಾ ವ್ಯಾಸಂಗಾವಧಿ 4 ವರ್ಷಕ್ಕೆ ಸೀಮಿತವಾಗಿರುತ್ತದೆ. ಈ ಅವಧಿಯಲ್ಲಿ ವಿದ್ಯಾರ್ಥಿಗಳು ಎಲ್ಲಾ ಪತ್ರಿಕೆಗಳಲ್ಲಿ ಉತ್ತೀರ್ಣರಾಗಿರಬೇಕು. ಇಲ್ಲವಾದಲ್ಲಿ ಪುನಃ ಹೊಸದಾಗಿ ನೋಂದಣಿ ಪ್ರಕ್ರಿಯೆ ಮಾಡಿಕೊಳ್ಳಬೇಕು.
2. ಯಾವುದೇ ವರ್ಷದಲ್ಲಿ ಒಂದು ಪತ್ರಿಕೆಯಲ್ಲಿ ಅನುತ್ತೀರ್ಣರಾದವರನ್ನು ಶ್ರೇಣಿ ಪ್ರದಾನಕ್ಕೆ ಪರಿಗಣಿಸುವುದಿಲ್ಲ.
3. ವಿದ್ವನ್ಮಧ್ಯಮಾ ಮೊದಲನೆಯ ವರ್ಷದ ಪರೀಕ್ಷೆಗೆ ಖಾಸಗಿಯಾಗಿ ಕುಳಿತುಕೊಳ್ಳುವ ಅಭ್ಯರ್ಥಿಗಳ ವಯಸ್ಸು ದಿನಾಂಕ: 05.09.2014ರಂದು ಕನಿಷ್ಟ 17 ವರ್ಷ ಪೂರ್ಣಗೊಂಡಿರಬೇಕು. ಪ್ರತೀ ವರ್ಷವೂ ಪರೀಕ್ಷೆ ಬರೆಯಬೇಕು.
4. ವಿದ್ವದುತ್ತಮಾ ಮೊದಲನೆಯ ವರ್ಷದ ಪರೀಕ್ಷೆಗೆ ಖಾಸಗಿಯಾಗಿ ಕುಳಿತುಕೊಳ್ಳುವ ಅಭ್ಯರ್ಥಿಗಳ ವಯಸ್ಸು ದಿನಾಂಕ: 05.09.2014ರಂದು ಕನಿಷ್ಟ 20 ವರ್ಷ ಪೂರ್ಣಗೊಂಡಿರಬೇಕು. ಪ್ರತೀ ವರ್ಷವೂ ಪರೀಕ್ಷೆ ಬರೆಯಬೇಕು.
5. ಹೊರರಾಜ್ಯದವರು ವರ್ಗಾವಣೆ ಪ್ರಮಾಣಪತ್ರವನ್ನು (ಟ್ರಾನ್ಸ್‌ಫರ್ ಸರ್ಟಿಫಿಕೇಟ್) ಆ ರಾಜ್ಯದ ಸಂಬಂಧಪಟ್ಟ ವಿದ್ಯಾಧಿಕಾರಿಗಳಿಂದ ಮೇಲುಸಹಿ(ಕೌಂಟರ್ ಸೈನ್) ಮಾಡಿಸಿರಬೇಕು. ವಲಸೆ ಆಧಾರ ಪ್ರಮಾಣಪತ್ರವನ್ನು ಪಡೆದಿರಬೇಕು.
6. 2014–15ನೇಸಾಲಿನ ಮೊದಲ ವರ್ಷದ ಬಿ.ಎ. / ಎಂ.ಎ ಪರೀಕ್ಷೆಯ ಹೊಸ ಪಠ್ಯಕ್ರಮನುಗುಣವಾಗಿ ಆಯಾ ಪತ್ರಿಕೆಗಳ ಪರೀಕ್ಷೆಯನ್ನು ಬರೆಯಬೇಕು.
7. ಖಾಸಗಿಯಾಗಿ ಪರೀಕ್ಷೆ ತೆಗೆದುಕೊಳ್ಳುವ ಅಭ್ಯರ್ಥಿಗಳು ಯಾವುದೇ ಸಂಸ್ಕೃತ ಕಾಲೇಜುಗಳಲ್ಲಿ ಯಾವುದೇ ವಿಭಾಗಕ್ಕೆ ಆ ಸಲಿನಲ್ಲಿ ಅಧಿಕೃತ (ಕಾಲೇಜು ವಿದ್ಯಾರ್ಥಿ) ಆಗಿರಬಾರದು.
8. ವಿದ್ವದುತ್ತಮಾ ಪರೀಕ್ಷೆಯಲ್ಲಿ ಪ್ರತಿ ಪತ್ರಿಕೆಯಲ್ಲಿ ಕನಿಷ್ಠ 40 ಅಂಕಗಳನ್ನು ಪಡೆದವರು ಮಾತ್ರ ಉತ್ತೀರ್ಣತೆಯನ್ನು ಹೊಂದುತ್ತಾರೆ.

**40 ರಿಂದ 49–ಉತ್ತೀರ್ಣ**
**50 ರಿಂದ 59– ದ್ವಿತೀಯ ಶ್ರೇಣಿ**
**60 ರಿಂದ 70– ಪ್ರಥಮ ಶ್ರೇಣಿ**
**70 ಕ್ಕಿಂತ ಹೆಚ್ಚು – ವಿಶಿಷ್ಟ ಶ್ರೇಣಿ**
**ಸಾಮಾನ್ಯ ಪ್ರವೇಶ ಪರೀಕ್ಷೆಯ ವಿವರ**

ಬಿ.ಎ. ವಿದ್ವನ್ಮಧ್ಯಮಾ

**50 ಅಂಕಗಳಿಗೆ** – ಸಂಸ್ಕೃತ ಸಾಹಿತ್ಯ ಪಠ್ಯಭಾಗದ ಸಾಮಾನ್ಯ ಜ್ಞಾನ.

**50 ಅಂಕಗಳಿಗೆ** – **ಸಂಸ್ಕೃತ ಸಾಹಿತ್ಯ ಪಠ್ಯಭಾಗದ ನ್ಯಾಯ ಮತ್ತು ವ್ಯಾಕರಣ ವಿಷಯ ಜ್ಞಾನ.**

**ಎಂ.ಎ ವೇದ ವಿದ್ವದುತ್ತಮಾ**

**50 ಅಂಕಗಳಿಗೆ** – **ಸಂಸ್ಕೃತ ಶಾಸ್ತ್ರಭಾಗದ ಸಾಮಾನ್ಯ ಜ್ಞಾನ(ವಸ್ತುನಿಷ್ಠ ಪ್ರಶ್ನೆಗಳು)**
**50 ಅಂಕಗಳಿಗೆ** – **ಸಂಬಂಧಿಸಿದ ಶಾಸ್ತ್ರಭಾಗದ ಪ್ರಬಂಧರೂಪದ ಪರೀಕ್ಷೆ.**

**ಪರೀಕ್ಷಾ ಶುಲ್ಕದ ವಿವರ**

1. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪ್ರವರ್ಗ–1 ರ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕದಲ್ಲಿ ವಿನಾಯಿತಿ ನೀಡಲಾಗಿದೆ. ವಿನಾಯಿತಿ ಪಡೆಯುವ ವಿದ್ಯಾರ್ಥಿಗಳು ತಹಸೀಲ್ದಾರ್ ಅವರಿಂದ ಪಡೆದ ಜಾತಿ ಪ್ರಮಾಣ ಪತ್ರದ ನಕಲು ಪ್ರತಿಯನ್ನು ದೃಢೀಕರಿಸಿ ಕಳುಹಿಸುವುದು. ನಕಲು ಪ್ರಮಾಣ ಪತ್ರ ಇಲ್ಲವಾದಲ್ಲಿ ಅಂತಹ ಅರ್ಜಿಗಳನ್ನು ಯಾವುದೇ ಸೂಚನೆ ನೀಡದೆ ತಿರಸ್ಕರಿಸಲಾಗುವುದು.

2. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 06.10.2014. ಶುಲ್ಕವನ್ನು ಡಿ.ಡಿ ರೂಪದಲ್ಲಿ **ಹಣಕಾಸು ಅಧಿಕಾರಿಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು** ಈ ವಿಳಾಸಕ್ಕೆ ಸಲ್ಲಿಸುವುದು. ದಿನಾಂಕದ ನಂತರ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಯಾವುದೇ ಪತ್ರವ್ಯವಹಾರಕ್ಕೆ ಅವಕಾಶವಿರುವುದಿಲ್ಲ.

3. ಒಂದು, ಎರಡನೇ ಮತ್ತು ಮೂರನೇ ವರ್ಷದ ವಿದ್ವನ್ಮಧ್ಯಮ/ ವಿದ್ವದುತ್ತಮ ಪರೀಕ್ಷಾ ಶುಲ್ಕದ ವಿವರ.

| **ಕ್ರ. ಸಂ** | **ಪರೀಕ್ಷೆಗಳ ವಿವರ** | **ನೋಂದಣಿ ಹಾಗು ಪ್ರವೇಶ ಶುಲ್ಕ** | ಪರೀಕ್ಷೆಯ ಶುಲ್ಕ | ಅರ್ಜಿ **ಶುಲ್ಕ** | **ಅಂಕಪಟ್ಟಿ ಶುಲ್ಕ** | **ಒಟ್ಟು ಮೊತ್ತ** |
|---|---|---|---|---|---|---|
| **1.** | ಬಿ.ಎ. ಸಂಸ್ಕೃತ ಶಾಸ್ತ್ರ / ವೇದ ವಿದ್ವನ್ಮಧ್ಯಮಾ | **1000.00** | 150.00 | 25.00 | 25.00 | 1200.00 |
| **2.** | ಎಂ.ಎ ಸಂಸ್ಕೃತ ಶಾಸ್ತ್ರ/ ವೇದ ವಿದ್ವದುತ್ತಮಾ | **1000.00** | 150.00 | 25.00 | 25.00 | 1200.00 |

4. 2013–14ನೇ ಸಾಲಿನಲ್ಲಿ ಅನುತ್ತೀರ್ಣ**ರಾದ** ವಿದ್ಯಾರ್ಥಿಗಳು ಪರೀಕ್ಷೆ ತೆಗೆದುಕೊಳ್ಳಲು ಪ್ರತಿ ವಿಷಯಕ್ಕೆ ಶುಲ್ಕ 200/– ಮಾತ್ರ.
5. ಪ್ರವೇಶ ಪರೀಕ್ಷೆಯ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಮಾತ್ರ ನೋಂದಣಿ ಇರುತ್ತದೆ. ದ್ವಿತೀಯ ವರ್ಷದ ಅಭ್ಯರ್ಥಿ**ಗಳಿಗೆ** ಪ್ರವೇಶ ಪರೀಕ್ಷೆ ಇರುವುದಿಲ್ಲ.
6. ಎಲ್ಲರೂ **ನೋಂದಣಿ** ಶುಲ್ಕವನ್ನು ಕಡ್ಡಾಯವಾಗಿ ಪಾವತಿಸಬೇಕು.
7. ಪ್ರವೇಶ ಪರೀಕ್ಷೆಗೆ ಮತ್ತು ಅಂತಿಮ ಪರೀಕ್ಷೆಗೆ ಅರ್ಹರಾದ ಅಭ್ಯರ್ಥಿಗಳ ಪಟ್ಟಿಯನ್ನು ಜಾಲತಾಣ (website:www.ksu.ac.in)ದಲ್ಲಿ ಪ್ರಕಟಿಸಲಾಗಿವುದು.
8. ಪ್ರವೇಶ ಪರೀಕ್ಷೆಯ ಅರ್ಜಿ ಸಲ್ಲಿಸಿದ ನಂತರ ಯಾವುದೇ ಮಾಹಿತಿಗಾಗಿ ವಿದ್ಯಾರ್ಥಿಗಳೇ ಕ.ಸಂ.ವಿ.ಯ ಪರೀಕ್ಷಾಂಗಕ್ಕೆ ದೂರವಾಣಿ ಮೂಲಕ ಮಾಹಿತಿಯನ್ನು ಪಡೆಯಬೇಕು. ಯಾವುದೇ ಪತ್ರ ವ್ಯವಹಾರವಿರುವುದಿಲ್ಲ.
9. ಪಠ್ಯಕ್ರಮದ ಸಂಪೂರ್ಣ ಮಾಹಿತಿಯನ್ನು ಕ.ಸಂ.ವಿ ಯ ಜಾಲತಾಣ (website:www.ksu.ac.in)ದಲ್ಲಿ ಪಡೆಯುವುದು

# ಪ್ರವೇಶ ಪರೀಕ್ಷಾ ವೇಳಾಪಟ್ಟಿ

**ಬಿ.ಎ.ವಿದ್ವನ್ಮಧ್ಯಾಮಾ (ಪ್ರಥಮ ವರ್ಷ) ಹಾಗೂ ಎಂ.ಎ. ವಿದ್ವದುತ್ತಮಾ (ಪ್ರಥಮ ವರ್ಷ)**

| | |
|---|---|
| ದಿನಾಂಕ: | 01.12.2014 (ಸೋಮವಾರ) |
| ಸಮಯ: | ಬೆಳಿಗ್ಗೆ 10.30 ರಿಂದ 1.00 |
| ಸ್ಥಳ : | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, |
| ಫಲಿತಾಂಶ ದಿನಾಂಕ: | 10.12.2014 |

ಪ್ರವೇಶ ಪರೀಕ್ಷೆಗೆ ಅರ್ಹರಾದ ಎಲ್ಲಾ ಅಭ್ಯರ್ಥಿಗಳು ಈ ಪರೀಕ್ಷಾ ಕೇಂದ್ರದಲ್ಲಿ ಸಕಾಲದಲ್ಲಿ ಹಾಜರಾಗುವುದು.

**ಡಾ.ಬಿ.ಗೋವಿಂದ(9632079891)**
**ಸಹಾಯಕ ನಿರ್ದೇಶಕರು**
**(ಪರೀಕ್ಷಾಂಗ).ಕ.ಸಂ.ವಿ.**

**ಕುಲಸಚಿವರು**

# ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ

ಚಾಮರಾಜಪೇಟೆ, ಬೆಂಗಳೂರು–560 018

**ಬಿ.ಎ. ಮತ್ತು ಎಂ.ಎ ಸಂಸ್ಕೃತ/ವೇದ ಖಾಸಗಿ ಅಭ್ಯರ್ಥಿಗಳ ನೋಂದಣಿಗಾಗಿ ಪ್ರವೇಶ ಪರೀಕ್ಷೆ ಅರ್ಜಿ ನಮೂನೆ**

1) ಬಿ.ಎ. ಸಂಸ್ಕೃತ/ವೇದ ವಿದ್ವನ್ಮಧ್ಯಮಾ

2) ಎಂ.ಎ. ಸಂಸ್ಕೃತ/ವೇದ ವಿದ್ವದುತ್ತಮಾ

**ಇತ್ತೀಚಿನ ದೃಢೀಕೃತ ಭಾವಚಿತ್ರ**

ಶಾಸ್ತ್ರಭಾಗ:–

| | | |
|---|---|---|
| 1. | ಅಭ್ಯರ್ಥಿಯ ಹೆಸರು (ಇಂಗ್ಲೀಷ್/ದೇವನಾಗರಿ/ಕನ್ನಡ ಎಸ್ಎಸ್ಎಲ್ಸಿ ಅಂಕಪಟ್ಟಿಯಂತೆ) | |
| 2. | ತಂದೆಯ ಹೆಸರು (ಎಸ್ಎಸ್ಎಲ್ಸಿ ಅಂಕಪಟ್ಟಿಯಂತೆ) | |
| 3. | ಜನ್ಮದಿನಾಂಕ ದಾಖಲೆ ಒದಗಿಸುವುದು | |
| 4. | ರಾಷ್ಟ್ರೀಯತೆ/ಜಾತಿ | |
| 5. | ಅಂಚೆ ವಿಳಾಸ | |
| 6. | ಮೂಲ ದಾಖಲೆಗಳ ದೃಢೀಕೃತ ಪ್ರತಿಗಳು | 1)<br>2)<br>3)<br>4)<br>5) |

ಸ್ಥಳ:
ದಿನಾಂಕ:

**ಅಭ್ಯರ್ಥಿಯ ಸಹಿ**

1. **'ಹಣಕಾಸು ಅಧಿಕಾರಿಗಳು'** ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು ಇವರ ಹೆಸರಿಗೆ ಡಿ.ಡಿ.ಯನ್ನು ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಪಡೆದು ನಿಗದಿತ ದಿನಾಂಕದೊಳಗೆ ಅರ್ಜಿಯೊಂದಿಗೆ ಕುಲಸಚಿವರು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು–560018 ಈ ವಿಳಾಸಕ್ಕೆ ಸಲ್ಲಿಸುವುದು.

2. **ನೋಂದಣಿ ಪ್ರವೇಶ ಶುಲ್ಕ ರೂ. 1200/–** ಡಿ.ಡಿ. ಸಂಖ್ಯೆ:.......................................ದಿನಾಂಕ.................................